

ನಾವಿಲ್ಲಿಗೆ ಮೂರು ಮುಖ್ಯ ಪಕ್ಷಿಗಳ ಚಿತ್ರ ತೆಗೆಯುವ ಇರಾದೆ ಹೊತ್ತುಕೊಂಡು ಬಂದಿದ್ದೆವು. ಈ ಪಕ್ಷಿಗಳನ್ನು ನೋಡುವ ಕನಸು ಮತ್ತು ಆಸೆ ಶತಮಾನಗಳಷ್ಟು ಹಳೆಯದು. ತುಂಬಾ ನಿರೀಕ್ಷೆ, ಅತಿಯಾಸೆ ಹೊತ್ತು ಹಳದಿ ಹಸಿರು ಬಣ್ಣದ ಲಾಂಗ್ ಟೈಯಿಲ್ಡ್ ಬೋರ್ಡ್ ಬಿಲ್, ರಕ್ತ ವರ್ಣದ ಸುಂದರ ರೆಡ್ ಹೆಡೆಡ್ ಟ್ರೋಗನ್, ಹಾಗೂ ಚಿತ್ತಾರದ ಕೊಕ್ಕಿನ ರೂಪಸ್ ಹಾರ್ನ್ ಬಿಲ್ ಎಂಬ ಈ ಮೂರು ಹಕ್ಕಿಗಳನ್ನು ಹುಡುಕಬೇಕಾಗಿತ್ತು. ಮೂರು ಹಕ್ಕಿಗಳಲ್ಲಿ ಎರಡರ ನೆಲೆ ಪಕ್ಕಾ ಗೊತ್ತಿತ್ತು. ಕೆಂಪು ತಲೆ ಟ್ರೋಗನ್‌ಗಾಗಿ ಒಂದಷ್ಟು ಕಸರತ್ತು ಮಾಡಲೇಬೇಕಿತ್ತು.

ಮಧ್ಯಾಹ್ನದ ಊಟ ಮುಗಿಸಿದ ತಕ್ಷಣ ನಮ್ಮ ದಾರಿತೋರುಗ ರಂಟೂ ನಮ್ಮನ್ನು ಲಾಂಗ್ ಟೈಲ್ಡ್ ಬ್ರೋಡ್ ಬಿಲ್ ಪಕ್ಷಿ ಗೂಡು ಕಟ್ಟಿರುವ ಸ್ಥಳಕ್ಕೆ ಕರೆದುಕೊಂಡು ಹೋದ. ಎತ್ತರದ ಮರದ ಮೇಲೆ ಬ್ರೋಡ್ ಬಿಲ್ ಹಕ್ಕಿಗಳು ಮನೆ ನಿರ್ಮಿಸುವ ಕೆಲಸದಲ್ಲಿ ಬಿಝೀ ಆಗಿದ್ದವು. ವಾರದಿಂದ ಸತತವಾಗಿ ಮಳೆ ಸುರಿದ ಕಾರಣದಿಂದ ಅವುಗಳು ಮೊದಲು ಕಟ್ಟಿದ್ದ ಗೂಡು ನಾಶವಾಗಿತ್ತು. ಇದರಿಂದ ಕೊಂಚವೂ ವಿಚಲಿತವಾಗದ ಪಕ್ಷಿಗಳು ಅದರ ಪಕ್ಕದಲ್ಲೇ ಮತ್ತೊಂದು ಹೊಸ ಗೂಡನ್ನು ಛಲದಿಂದ ನಿರ್ಮಿಸುತ್ತಿದ್ದವು. ಈ ಹಿಂದೆ ವಾರದಿಂದ ಕಷ್ಟಪಟ್ಟು ರೂಪಿಸಿದ್ದ ತಮ್ಮ ಮನೆ ಹಾಳಾಯಿತೆಂದು ಅವು ರೋದಿಸುತ್ತಿರಲಿಲ್ಲ. ಕೊಂಚವೂ ಬೇಸರವಿರಲಿಲ್ಲ. ನೂತನ ಮನೆಯನ್ನು ಬಹಳ ಸಂಭ್ರಮದಿಂದ ಮಳೆಯಲ್ಲಿ ನೆನೆಯುತ್ತಲೇ ಕನಸಿನಂತೆ ಕಟ್ಟುತ್ತಿದ್ದವು. ಸುತ್ತಮುತ್ತ ಸಿಗುತ್ತಿದ್ದ ಒಣ ಎಲೆಗಳನ್ನು, ನುಣುಪಾದ ಬೇರುಗಳನ್ನು, ಮೃದುವಾದ ಹೂವಿನ ಪಕಳೆಗಳನ್ನು ಸಂಗ್ರಹಿಸಿ ತರುತ್ತಿದ್ದವು.

ಇವುಗಳ ಸಡಗರ, ಛಲದ ಬದುಕು ನಿಂತು ನೋಡುವುದೇನೋ ಖುಷಿ. ಆದರೆ ನಾವು ನಿಂತಿದ್ದ ಜಾಗ ಬಹಳ ಸೂಕ್ಷ್ಮವಾಗಿತ್ತು. ಪ್ರಪಾತದ ಕಡೆಗಿತ್ತು. ಕೊಂಚ ಯಾಮಾರಿದರೂ ಕ್ಯಾಮೆರಾಗಳ ಸಮೇತ ಮುಗ್ಗರಿಸಿ ಪ್ರಪಾತದ ಆಳಕ್ಕೆ ಹೋಗಬಹುದಿತ್ತು. ಈ ಕಾರಣಕ್ಕೆ ಹಿಮಾಲಯ ಶ್ರೇಣಿಯ ಬೆಟ್ಟಗಳಲ್ಲಿ ಪಟ ತೆಗೆಯುವುದು ಸದಾ ಸವಾಲಿನ ಕೆಲಸ ಎನಿಸುತ್ತದೆ. ಆಗಾಗ ಎಡೆಬಿಡದೆ ಸುರಿಯುವ ಮಳೆ ನಮ್ಮ ಕ್ಯಾಮೆರಾಗಳನ್ನು ಜೋಪಾನ ಮಾಡಿಕೊಳ್ಳುವ ಎಚ್ಚರಿಕೆ ಕೊಡುತ್ತಿತ್ತು. ಕ್ಯಾಮೆರಾ ಮೇಲೆ ಒಂದು ವೇಳೆ ನೀರು ಬಿದ್ದರೆ, ಕ್ಷಣಮಾತ್ರದಲ್ಲಿ ಲಕ್ಷಾಂತರ ರೂಪಾಯಿ ಮುಂಡಾಮೋಚಿಕೊಳ್ಳುವ ಸದವಕಾಶವಿತ್ತು.

ನೋಡಲು ಮುದ್ದಾದ ಅಷ್ಟೇ ಮುಗ್ಧನಂತೆಯೂ